ಸಾಕ್ಷಿಯು ದಿನಾಂಕ- **21-11-2023** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀಸವಾಲು- ಆರೋಪಿ ಪರ ಶ್ರೀ ಕೆ.ಎಸ್.ಎನ್. ವಕೀಲರಿಂದ</u> -

ನಾನು ಕಾನೂನು ಪಧವಿಯನ್ನು **2000** ದಲ್ಲಿ ಮುಗಿಸಿದ್ದೆನೆ. ನಾನು ವಕೀಲ ವೃತ್ತಿಯನ್ನು **2016** ರಲ್ಲಿ ವಕೀಲರಾದ ಶ್ರೀ.ಸಿ.ಪಿ.ವೈ ರಲ್ಲಿ ಪ್ರಾರಂಭಿಸಿರುತ್ತೆನೆ. ಅವರ ಅಡಿಯಲ್ಲಿ ಮಾರ್ಚ **2016** ರಿಂದ ಆಗಸ್ಟ **2016** ರ ವರೆಗೆ ವಕೀಲ ವೃತ್ತಿ ಮಾಡಿರುತ್ತೇನೆ. ನಂತರ ಶ್ರೀ.ಕಾಳಿದಾಸ ವಕೀಲರ ಅಡಿಯಲ್ಲಿ ಸೆಪ್ಟಂಬರ್ **2016** ರಿಂದ ಮಾರ್ಚ **2017** ರವರಗೆ ವಕೀಲ ವೃತ್ತಿ ಮಾಡಿರುತ್ತೇನೆ. ನಂತರ ಶ್ರಿ.ಕೆ.ಜಿ.ಪಿ.ಆರ್. ವಕೀಲ ಅಡಿಯಲ್ಲಿ ಏಪ್ರಿಲ್ **2017** ರಿಂದ ಅಕ್ಟೋಬರ್ **2022** ರವರಗೆ ಕಿರಿಯ ನ್ಯಾಯವಾದಿ ಎಂದು ಗುರುತು ಹೊಂದಿರುತ್ತೆನೆ. **2016** ರಿಂದ **2022** ವರೆಗೆ ಕಿರಿಯ ನ್ಯಾಯವಾದಿ ಎಂದು ವೃತ್ತಿಯನ್ನ ನಡೆಸಿದ್ದೇನಿ ಎಂದರೆ ಹೌದು ಅದರ ಜೊತೆ ಸ್ವಂತ ಪ್ರಕರಣಗಳನ್ನು ನಡೆಸುತ್ತಿದ್ದೆ. ಕಿರಿಯ ನ್ಯಾಯವಾದಿ ಎಂದು ವೃತ್ತಿಯನ್ನ ನಡೆಸುವಾಗ ತಿಂಗಳಿಗೆ ಆದಾಯ ಎಷ್ಟುಇತ್ತು ಎಂದರೆ ರೂ.**5,000/-** ರಿಂದ **50,000/-** ವರಗೆ ಇತ್ತು.

ನಾನು ವಕೀಲ ವೃತ್ತಿ ಪ್ರಾರಂಭ ಮಾಡುವ ಪೂರ್ವದಲ್ಲಿ ನಮ್ಮ ಕೌಟುಂಬಿಕ ವ್ಯಾಪಾರ , ಟ್ರಾನ್ಸಪೋರ್ಟ ಮತ್ತು ಕಟ್ಟಡ ಕಂಟ್ರಕ್ಟರ ಎಂದು ಕೆಲಸ ಮಾಡುತ್ತಿದ್ದೆ. ಇದನ್ನು ಹೊರತು ಪಡಿಸಿ ಬೇರೆ ಎನು ಮಾಡಿದ್ದೀರಿ ಎಂದರೆ ಈಗ ನೆನಪಿಲ್ಲ. ಆರೋಪಿಯ ಮೇಲೆ ನಾನು ಒಟ್ಟಾರೆ **12** ಪ್ರಕರಣ ದಾಖಲಿಸಿದ್ದೇನೆ. ಮೊತ್ತ ಎಷ್ಟು ಎಂದರೆ ರೂ. **12,77,800/-** ಇರುತ್ತದೆ. ಆರೋಪಿಯನ್ನು ಹೊರತುಪಡಿಸಿ ಬೇರೆ **4-5** ಜನರ ಮೇಲೆ ಚೆಕ್ ಬೌನ್ಸ ಪ್ರಕರಣ ದಾಖಲು ಮಾಡಿದ್ದೆನೆ. ಅವು ಸಹ ಇತ್ಯರ್ಥ್ಯ ಹಂತದಲ್ಲಿ ಇವೆ. ನಾನು ಒಟ್ಟಾರೆ **30-40** ಪ್ರಕರಣಗಳನ್ನು ದಾಖಲಿಸಿರುತ್ತೆನೆ ಎಂದರೆ ಒಟ್ಟಾರೆ **24** ಪ್ರಕರಣಗಳನ್ನು ದಾಖಲು

ಮಾಡಿದ್ದೇನೆ. ಶ್ರೀಕಾಂತ ಎನ್ನುವವರ ಮೇಲೆ ರೂ.**20,000/-**ಗಳಿಗೆ , ಸಂತೋಷ ಖಂಡೇಲ್ವಾಲ್ ರೂ.**30,000/-** ಗಳಿಗೆ, ಬುಡಸಾಬ್ ರೂ. **25,000/-** ಗಳಿಗೆ , ಮೊಹಮ್ಮದ್ ರಫೀಕ್ ರೂ. **45,000/-** ಗಳಿಗೆ , ಸರ್ದಾರ್ ಖಾನ ರೂ. **4,00,000/-** ಗಳಿಗೆ , ಮೊನಿಕ್ ಶರ್ಮ ಮತ್ತು ಲಕ್ಷ್ಮೀ ಕಾಂತ ರೂ.**13,600/-** ಗಳಿಗೆ, ಲಕ್ಷ್ಮೀಕಾಂತ ಶರ್ಮ ರೂ.**14,58,000/-** ಮತ್ತು ರೂ.**8,35,000/-** ಗಳಿಗೆ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ಇವು ಬಿಟ್ಟು ಬೇರೆ ಪ್ರಕರಣಗಳು ನೆನಪಿಲ್ಲ. ನಾನು ಒಟ್ಟಾರೆ ರೂ.**40,00,000/-** ಗಳಿಗೆ ಬೇರೆ ಬೇರೆ ಪ್ರಕರಣಗಳನ್ನು ದಾಖಲಿಸಿರುತ್ತೇನೆ.

ಆಟೋ ಮೊಬೈಲ್ ವ್ಯಾಪಾರವನ್ನ ನನ್ನ ತಂದೆ ಮತ್ತು ಚಿಕ್ಕಪ್ಪ ಪಾಲುದಾರರಾಗಿ ನಡೆಸುತ್ತಿದ್ದರು. ಗುರುಶರಣಸಿಂಗ್ ನನಗೆ ಅಣ್ಣನಾಗಬೇಕು. ಅವರ ಮೂಲಕ ಸಹ ನಾನು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅವರು ಎಷ್ಟು ಪ್ರಕರಣಗಳನ್ನು ಹಾಕಿದ್ದಾರೆ ಎಂದರೆ ಅವರು ಸುಮಾರು **4-5** ಪ್ರಕರಣಗಳು ಹಾಕಿದ್ದಾರೆ. ಗುರುಶರಣಸಿಂಗ್ ರವರು ಗವಿಸಿದ್ದಪ್ಪ ರವರ ಮೇಲೆ ರೂ.**16,00000/-** ಗಳಿಗ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ನನ್ನ ಅಣ್ಣನಾದ ಗುರುಶರಣಸಿಂಗ್ ರವರು ಸಹ ಒಟ್ಟಾರೆ ರೂ.**40,00,000/-** ಗಳಿಗೆ ಬೇರೆ ಬೇರೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ನಮ್ಮದು ಒಟ್ಟು ಕುಟುಂಬ ಎಂದರೆ ಸರಿ.

ಆರೋಪಿ ನನಗೆ ಸುಮಾರು **15-20** ವರುಷಗಳಿಂದ ಪರಿಚಯ. ಆರೋಪಿ ಮತ್ತು ನಾನು **2008** ರಿಂದ **2021** ರವರಗೆ ವ್ಯವಹಾರ ಮಾಡಿರುತ್ತೇವೆ. ನಾನು ವ್ಯಾಪಾರಿ ಯಾಗಿದ್ದರಿಂದ ಲೆಕ್ಕಪತ್ರಗಳನ್ನು ಇಡುತ್ತಿದ್ದೆ ಎಂದರೆ ಸರಿ. ನಾನು ಆದಾಯ ತೆರಿಗೆದಾರನಾಗಿದ್ದೇನೆ ಎಂದರೆ ಹೌದು ನಾನು **2016** ರಿಂದ ತೆರಿಗೆ ಪಾವತಿಸುತ್ತಿದ್ದೇನೆ. **2016** ರಿಂದ ನನಗೆ ಬರಬೇಕಾದ ಹಣ ನಾನು ತೆರಿಗೆಯಲ್ಲಿ ತೋರಿಸಿರುತ್ತೇನೆ ಎಂದರೆ ಸರಿ. ನಾನು ಬಡ್ಡಿ ವ್ಯವಹಾರವನ್ನು ಸುಮಾರು **30** ವರುಷಗಳಿಂದ ಮಾಡುತ್ತಿದ್ದೇನೆ. ಅದಕ್ಕೆ ಲೆಕ್ಕಪತ್ರವನ್ನು ಇಟ್ಟಿದ್ದಾರಾ ಎಂದರೆ

ಬ್ಯಾಲೆನಸ್ ಇರುವವರ ಬಗ್ಗೆ ಇಟ್ಟಿರುತ್ತೇನೆ. ಎಷ್ಟು ಅಸಲು ಇದೆ ಮತ್ತ ಜಮಾ ಎಂದು ಬರೆದು ಇಟ್ಟಿದ್ದೀರಾ ಎಂದರೆ ಪ್ರಾಂಸರಿ ನೋಟ್ ಹಿಂದೆ ಬರೆದಿರುತ್ತೇನೆ. ಪೇಮೆಂಟ್ ಮಾಡಿದ್ದರೆ ಪ್ರಾಂಸರಿ ನೋಟ್ ಹಿಂದೆ ಬರೆದಿರುತ್ತೇನೆ. ಆ ಬಗ್ಗೆ ಚೆಕ್ ನ್ನು ತೆಗೆದುಕೊಂಡಿದ್ದರೆ ಅದನ್ನು ಸಹ ಪ್ರಾಂಸರಿ ನೋಟ್ ಹಿಂದೆ ಬರೆದಿರುತ್ತೇನೆ. ಬಡ್ಡಿ ವ್ಯವಹಾರ ಮಾಡಲು ಪರವನಾಗಿ ಪಡೆದುಕೊಳ್ಳಬೇಕು ಎಂದರೆ ನಾನು ವೃತ್ತಿ ಎಂದು ಮಾಡುತ್ತಿಲ್ಲ. ನಾನು ಎಷ್ಟೆಲ್ಲ ಪ್ರಕರಣಗಳು ದಾಖಲಿಸಿದ್ದರಿಂದ ಪರವಾನಿಗೆ ಬೇಕು ಎಂದು ಅವಶ್ಯಕತೆ ಇಲ್ಲ.

ನಾನು ಚೀಟಿಂಗ್ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿ. ನಾನು ಪರವಾನಿಗೆ ಪಡೆಯದೇ ವ್ಯವಹಾರ ಮಾಡುತ್ತಿದ್ದರಿಂದ ಅದು ಕಾನೂನು ಬಾಹಿರ ಎಂದರೆ ಸರಿಯಲ್ಲ. ಸದರಿ  ಕಾನೂನು ಬಾಹಿರ ವ್ಯವಹಾರಕ್ಕೆ ನೀಡಿರುವ ಹಣವನ್ನು ನಾನು ನ್ಯಾಯಾಲಯದ ಮೂಲಕ ಪಡೆದುಕೊಳ್ಳಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಆಟೋಮೊಬೈಲ್ಸ್ , ಹಾರ್ಡ್‌ಫೇರ್ ಮತ್ತು ಕನಸ್ಟ್ರಷನ್ ಮೆಟಿರಿಯಿಲ್ ಪರವಾನಿಗೆ ಪಡೆದಿರುತ್ತೆನೆ. ಬೇರೆ ವ್ಯವಹಾರಕ್ಕೆ ಅವಶ್ಯಕತೆ ಇಲ್ಲದೇ ಇದ್ದ ಕಾರಣ ಪರವಾನಿಗೆ ಪಡೆದಿಲ್ಲ. ಯಾವುದಕ್ಕೆ ಪರವಾನಿಗೆ ಬೇಕಾಗಿಲ್ಲ ಎಂದರೆ ಟ್ರಾನ್ಸಪೋರ್ಟ ಕನಸ್ಟ್ರಷನ್ ಮತ್ತು ಫ಼ಂಡಲಿ  ಲೋನ್ ಗೆ ಬೇಕಿಲ್ಲ. ನನಗೆ ಕಾನೂನು ಜಾನ ಸ್ವಲ್ಪ ಸ್ವಲ್ಪ ಇದೆ.

ಸಾಮಾನ್ಯವಾಗಿ ಸಾಲದ ವ್ಯವಹಾರ ಮಾಡಬೇಕಾದರೆ ಯಾವ ದಾಖಲಾತಿ ಪಡೆದುಕೊಳ್ಳಬೇಕು ಎಂಬುದು ನನಗೆ ಅರಿವು ಇದೆ. ಅಮರ್ ದೀಪ್ ಕೌರ್ ನನಗೆ ಹೆಂಡತಿಯಾಗಬೇಕು. ನಾನು ಮತ್ತು ನನ್ನ ಹೆಂಡಿತಿ ಜಂಟಿ ಅಕೌಂಡ್ ಹೊಂದಿದ್ದೆನೆ. ಸುಕೋ ಬ್ಯಾಂಕ್ ಅಕೌಂಡ್ ನನ್ನ , ನನ್ನ ಹೆಂಡತಿ ಮತ್ತು ನನ್ನ ತಾಯಿ ಹೆಸರಿನಲ್ಲಿದೆ. ಜಂಟಿ ಅಕೌಂಟ್ ಅಪರೇಟ್ ಮಾಡಬೇಕಾದರೆ ಎಲ್ಲರ ಅನುಮತಿ ಬೇಕು ಎಂದರೆ ಅಪ್ಲಿಕೇಷನ್ ನಲ್ಲಿ ಆ ರೀತಿ ತಿಳಿಸಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿದ್ದೀರಾ ಎಂದರೆ ಬ್ಯಾಂಕ್ ಬಳಿ ಇರುತ್ತದೆ.

ನಾನು **30** ಬ್ಯಾಂಕ್ ಖಾತೆಗಳನ್ನು ಹೊಂದಿದ್ದೇನೆ. ಅದರಲ್ಲಿ **25** ಜಂಟಿ ಖಾತೆ ಇದ್ದು, **05** ವೈಯಕ್ತಿಕ ಖಾತೆಗಳಿದ್ದಾವೆ.

ಆರೋಪಿಯು ರೂ.**12,77,800/-** ಬಾಕಿ ಇದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರು ಮಾಡಿದ್ದೀರಾ ಎಂದರೆ ಆರೋಪಿ ನೀಡಿರುವ ಸ್ವೀಕೃತಿಯನ್ನು ಹಾಜರು ಪಡಿಸಿದ್ದೇನೆ. ಸದರಿ ಹಣವನ್ನು ನಾನು ಆರೋಪಿಗೆ **8** ಕಂತುಗಳಲ್ಲಿ ನೀಡಿರುತ್ತೆನೆ. ಸದರಿ ಹಣವನ್ನು ನಾನು ಜನವರಿ **-2008** ರಿಂದ ಮಾರ್ಚ **-2009** ರ ವರೆಗೆ ನೀಡಿರುತ್ತೇನೆ. ಎಷ್ಟು ಹಣವನ್ನು ಯಾವ ದಿನಾಂಕದಂದು ಕೊಟ್ಟಿದ್ದೀರಿ ಎಂದು ಹೇಳಬಹುದಾ ಎಂದರೆ ಇಲ್ಲ. ಪ್ರಾಂಸರಿ ನೋಟ ನ ಮೇಲೆ ಆ ಬಗ್ಗೆ ಬರೆದಿರುತ್ತೇನೆ. ಆರೋಪಿಯು ಪ್ರಸ್ತುತ ಸಾಲಕ್ಕೆ ಸಂಬಂಧಿಸಿದಂತೆ ರೂ. **8,00,000/-** ಗಳನ್ನು ಬಡ್ಡಿಯಾಗಿ ನೀಡಿರುತ್ತಾರೆ. ಯಾವ ದಿನದಂದು ಎಷ್ಟು ನೀಡಿದ್ದಾರೆಂದು ದಾಖಲಾತಿ ಇದಿಯಾ ಎಂದರೆ ಬಾಂಡ್ ಪೇಪರ್ ಹಿಂದುಗಡೆ ಬರೆದಿದ್ದು ಅದನ್ನು ಆರೋಪಿಗೆ ವಾಪಸ್ಸು ನೀಡಿರುತ್ತೇನೆ. ನಾನು ಯಾವುದೆ ಬಾಂಡ್ ನ್ನು ಆರೋಪಿಗೆ ವಾಪಸ್ಸು ನೀಡಿಲ್ಲ ಎಂದರೆ ಸರಿಯಲ್ಲ.

ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಜಾನ ಇದೆ. ಸೆಲ್ಫ್ ಚೆಕ್ ನ್ನು ಸ್ವಂತಕ್ಕೆ ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ರೂ.**12,77,800/-** ಗಳನ್ನು ನಗದು ರೂಪದಲ್ಲಿ ಆರೋಪಿಗೆ ನೀಡಿರುತ್ತೇನೆ. ಸದರಿ ಹಣವನ್ನು ನೀಡಲು ಆದಾಯದ ಮೂಲ ಎನು ಎಂದರೆ ಕೌಟುಂಬಿಕ ಆದಾಯದಿಂದ ನೀಡಿರುತ್ತೇನೆ. ಕೌಟುಂಬಿಕ ಆದಾಯದಲ್ಲಿ ನಾನು ಒಬ್ಬನೇ ಆದಾಯ ತೆರಿಗೆ ಪಾವತಿದಾರ ಎಂದರೆ ಸರಿಯಲ್ಲ ಮತ್ತು ಯಾರು ಆದಾಯ ತೆರಿಗೆ ಪಾವತಿದಾರರಾಗಿದ್ದಾರೆ ಎಂದರೆ ನನ್ನ ತಾಯಿ, ನನ್ನ ಹೆಂಡತಿ ಮತ್ತು ನನ್ನ ಅಣ್ಣ. ಸದರಿ ಸಾಲದ ಬಗ್ಗೆ ಆದಾಯ ತೆರಿಗೆಯಲ್ಲಿ ಮಾಡಿದ್ದಿರಾ ಎಂದರೆ ಆ ಸಮಯದಲ್ಲಿ ನಾವು ಆದಾಯ ತೆರಿಗೆ ಕಟ್ಟುತ್ತಿರಲಿಲ್ಲ. ಯಾವ ವರುಷದಂದು ಕಟ್ಟಲು ಪ್ರಾರಂಭಿಸಿದ್ದೀರಿ ಎಂದರೆ **2016** ರಿಂದ. ನಂತರದಲ್ಲಿ ತೋರಿಸಿರುತ್ತಿರಾ ಎಂದರೆ ಹೌದು. ಕೌಟುಂಬಿಕ ಆದಾಯದಿಂದ

ಎಷ್ಟು ದುಡ್ಡು ಮತ್ತು ವೈಯಕ್ತಿಕವಾಗಿ ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂದರೆ ನೆನಪಿಲ್ಲ.

ಆರೋಪಿ ನನ್ನ ಜೊತೆಯಲ್ಲಿ ಟೈಯರ್ ವ್ಯವಹಾರ ಮಾಡುತ್ತಿದ್ದರು. ಸದರಿ ಟೈಯರ್ ವ್ಯವಹಾರ ಮಾಡಿರುವ ಸಾಲವನ್ನು ನಾನು ಈಗ ಕೇಳುತ್ತೀದ್ದೀರಾ? ಎಂದರೆ ಇಲ್ಲ ಅದನ್ನು ಅವರು ಪಾವತಿಸಿದ್ದಾರೆ. ಆ ಬಗ್ಗೆ ಆವಾಗ ಲೆಕ್ಕಪತ್ರವನ್ನು ಇಟ್ಟಿರುತ್ತೇನೆ. ಆರೋಪಿ ಬೇರೆ ಯಾವ ವ್ಯವಹಾರ ಮಾಡಿದ್ದಾರೆ ಎಂದರೆ ನೆನಪಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು,
ಹೊಸಪೇಟೆ.